

## ಮರೆಯಾಗುತ್ತಿರುವ ಮೂರ್ತೆ ಕಸುಬು

ದಕ್ಷಿಣ ಕನ್ನಡದಲ್ಲಿ ಹಿಂದೆ ತಾಳಿ ಮರದಿಂದ ಕಳ್ಳು ತೆಗೆದು ಅದರಿಂದ ವಾಲೆ ಬೆಲ್ಲ ತಯಾರಿಸುತ್ತಿದ್ದರು. ಇದರ ಜೊತೆಗೆ ಕಳ್ಳನ್ನು ಮಾರಾಟ ಮಾಡುತ್ತಿದ್ದರು. ಆದರೆ ಈಗ ಈ ಮೂರ್ತೆ ಕಸುಬು ನಿಧಾನಕ್ಕೆ ಮರೆಯಾಗುತ್ತಿದೆ. ಈ ಕಸುಬು ಹೆಚ್ಚಿನ ಶ್ರಮ ಬೇಡುತ್ತದೆ. ದಿನಕ್ಕೆ ಮೂರು ಬಾರಿ ಮರ ಹತ್ತಿ, ಇಳಿಯಬೇಕು. ಪರಿಶ್ರಮದ ಜೊತೆಗೆ ಮರದಿಂದ ಬೀಳುವ ಅಪಾಯವೂ ಇರುವ ಕಾರಣಕ್ಕೆ ಯುವ ಜನಾಂಗವು ಈ ಕಸುಬಿನತ್ತ ಮುಖ ಮಾಡುತ್ತಿಲ್ಲ ಎನ್ನುವುದು ಹಿರಿಯರ ಅಭಿಪ್ರಾಯ.

ಹಿಂದೆ ತಾಳಿ ಮರ ಇದ್ದ ಮಾಲೀಕರು ಮರಗಳನ್ನು ಮೂರ್ತೆ ಕಸುಬು ಮಾಡುವವರಿಗೆ ವರ್ಷವೊಂದಕ್ಕೆ ನಿಗದಿತ ಶುಲ್ಕ ಪಾವತಿಯ ಆಧಾರದಲ್ಲಿ ಕಳ್ಳು ತೆಗೆಯಲು ನೀಡುತ್ತಿದ್ದರು. ಆದರೆ ಈಗ ಈ ಕಸುಬು ಮಾಡುವವರು ಕಡಿಮೆ ಆಗಿದ್ದಾರೆ. ಕೆಲವರು ಪೇಟೆ ಬದಿಯಲ್ಲಿ ತಾಳಿ ಮರದ ಹಣ್ಣುಗಳನ್ನು ಮಾರುವುದು ಮಾತ್ರ ಕಂಡು ಬರುತ್ತದೆ.

–ಅರುಣ್, ಕಿಲ್ಲೂರು







## ಬಾಡಿಗೂ ಬಂಪರ್ ಬಂತೇ!

ಬೆಂಗಳೂರಿನ ಕನಕಪುರ ರಸ್ತೆಯಲ್ಲಿ ಈಚೆಗೆ ಕಂಡ ದೃಶ್ಯವಿದು. ಇದರಲ್ಲಿ, ಬೈಕ್‌ನ ಹಿಂಬದಿ ಸವಾರನೊಬ್ಬ ಹೆಲ್ಮೆಟ್ ಧರಿಸಿಯೂ ಕುತ್ತಿಗೆಗೆ ಬೈಕ್‌ನ ಟೈರ್ ಅನ್ನು ಹಾಕಿಕೊಂಡಿದ್ದಾನೆ. ಆ ದೃಶ್ಯವನ್ನು ನೋಡಿದಾಕ್ಷಣ ನೆನಪಿಗೆ ಬಂದದ್ದು ವಾಹನಗಳಿಗೆ ಅಳವಡಿಸುವ ಬಂಪರ್. ಬೈಕ್ ಓಡಿಸುವ ಬಾಡಿಗೂ (ದೇಹಕ್ಕೂ) ಬಂಪರ್ ಬಂತೇ ಅನಿಸಿದ್ದುಂಟು.

ಅಪಘಾತ ಸಮಯದಲ್ಲಿ ವಾಹನಕ್ಕೆ ಆಗುವ ಹೆಚ್ಚಿನ ಹಾನಿಯನ್ನು ತಪ್ಪಿಸಲೆಂದೇ ಕಬ್ಬಿಣದ ಬಂಪರ್ ಅನ್ನು ಅಳವಡಿಸಲಾಗುತ್ತದೆ. ಅಂತೆಯೇ ಇಲ್ಲಿ ಹಿಂಬದಿ ಸವಾರನು ದೇಹಕ್ಕೆ ಬಂಪರ್‌ನಂತೆ ಬೈಕ್‌ನ ಟೈರ್ ಅನ್ನು ಹಾಕಿಕೊಂಡಿರಬಹುದೇನೋ ಗೊತ್ತಿಲ್ಲ. ಆದರೆ, ವಾಸ್ತವವಾಗಿ ಆ ಚಿತ್ರವು ಬೈಕ್ ಸವಾರನ ಜೀವನದ ಜಂಜಾಟವನ್ನು ಕಟ್ಟಿಕೊಡುತ್ತದೆ. ಯಾವುದೋ ಕಾರಣಕ್ಕೆ ಬೈಕ್‌ನಲ್ಲಿಯೇ ಟೈರ್‌ಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವಾಗ ಜಾಗದ ಕೊರತೆ ಉಂಟಾಗಿ ಕುತ್ತಿಗೆಗೆ ಟೈರ್ ಹಾಕಿಕೊಂಡಿರಬಹುದು!

–ವಾ. ಮುರಳೀಧರ, ತೀರ್ಥಹಳ್ಳಿ



## ಬದನೆ ಜಾತಿಯ ಕುದನೆ

ಚಿತ್ರದಲ್ಲಿ ಕಾಣುತ್ತಿರುವುದು ಕುದನೆ ಕಾಯಿ. ಬದನೆ ಜಾತಿಗೆ ಸೇರಿದ ಈ ಕಾಯಿ ಹಲವು ರೀತಿಯ ಔಷಧೀಯ ಗುಣಗಳನ್ನು ಹೊಂದಿದೆ. ಇದನ್ನು ಅಡುಗೆಗೂ ಉಪಯೋಗಿಸುವುದುಂಟು. ನೋಡಲು ಚಿಕ್ಕ ಕಾಯಿಯಂತೆ ಕಂಡರೂ ಇದರ ಉಪಯೋಗ ಹೇರಳವಾದದ್ದು. ಕುದನೆ ಕಾಯಿಗಳನ್ನು ಬಳಸಿ ಮಾಡುವ ಗೊಜ್ಜು ತುಂಬ ರುಚಿಕರ. ಇದರಿಂದ ರುಚಿಯಾದ ಸೂಪ್ ಸಹ ಮಾಡಬಹುದು. ಪೇಟೆಯ ವಿಷಯುಕ್ತ ತರಕಾರಿಗಳಿಗಿಂತ ನೈಸರ್ಗಿಕವಾಗಿ ಲಭ್ಯವಾಗುವಂತಹ ಇಂತಹ ವಿಷಮುಕ್ತ ತರಕಾರಿಗಳ ಬಗ್ಗೆ ಅರಿತು ಅವುಗಳನ್ನು ಹೆಚ್ಚು ಬಳಕೆಗೆ ತರಬೇಕು.

–ಪ್ರಸಾದ್, ಮೈರ್ಕಳ



### ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.
**ವಿಳಾಸ:** editorsu@sudha.co.in

@SudhaWeekly